**ದಿನಾಂಕಃ 03-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ ಃ ಪ್ರತಿವಾದಿ ಪರ ವಕೀಲರಾದ ಶ್ರೀ D.M.P ವಕೀಲರಿಂದಃ**

ಪ್ರಮಾಣ ಪತ್ರದಲ್ಲಿ ಬರೆದ ವಿಷಯ ನಿಜವಿರುತ್ತದೆ. ಅದಕ್ಕೆ ನನ್ನ ಸಹಿ ಇದ್ದು ಅದು ನನ್ನ ಮಾಹಿತಿ ಪ್ರಕಾರ ಸರಿ ಇರುತ್ತದೆ. ಅದನ್ನು ನನ್ನ ಮುಖ್ಯ ವಿಚಾರಣೆ ಅಂತಾ ಪರಿಗಣಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಈ ದಾವೆಯಲ್ಲಿ ಹಾಜರುಪಡಿಸಿದ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ದಾಖಲೆಗಳು ಈ ಕೆಳಕಂಡಂತೆ ಗುರುತಿಸಲಾಯಿತು.

| | | |
|---|---|---|
| **ನಿಡಿ-6** | ಃ | ದಿನಾಂಕಃ19-10-2023 ರಂದು ಅಮರಾಪುರ ಗ್ರಾಮದ ಜಮೀನು ಸರ್ವೆ ನಂ.21/2 ಕ್ಷೇತ್ರ 2 ಎಕರೆ ಕುರಿತು ಕರಿಯಪ್ಪ ಮ್ಯಾದನೇರಿ ಇವರು ಸಾಕ್ಷಿದಾರಳು ಅನಿತಾ ಡೊಳ್ಳಿನ್ ಇವರಿಗೆ ಬರೆದುಕೊಟ್ಟ ಮೂಲ ಖರೀದಿ ಪತ್ರ. ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-6(ಎ) ರಿಂದ (ಡಿ) ಎಂದು ಗುರುತಿಸಲಾಯಿತು. |
| **ನಿಡಿ-7** | ಃ | ಅಮರಾಪುರ ಜಮೀನು ಸರ್ವೆ ನಂ.21 ರ 2020-2021 ರಿಂದ 2022-2023 ನೇ ಸಾಲಿನ ಪಹಣಿ ಪತ್ರಿಕೆ. |
| **ನಿಡಿ-8** | ಃ | ಅಮರಾಪುರ ಜಮೀನು ಸರ್ವೆ ನಂ.21/2 ರ 2023-2024, 2024-2025, 2025-2026 ನೇ ಸಾಲಿನ ಪಹಣಿ ಪತ್ರಿಕೆ. |
| **ನಿಡಿ-9** | ಃ | ಎಂ.ಆರ್.ನಂ.ಹೆಚ್2/2023-2024. |

**ಪಾಟೀ ಸವಾಲುಃ ಶ್ರೀ B.C.G ವಾದಿ ಪರ ವಕೀಲರಿಂದಃ**

**ವಾದಿ ಪರ ವಕೀಲರು ಹಾಜರಿದ್ದು ಪಾಟೀಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.**

(ಸಾಕ್ಷಿಯು ನುಡಿದಂತೆ ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**ಹಿರಿಯ ವ್ಯವಹಾರ ನ್ಯಾಯಾಧೀಶರು, ಕೊಪ್ಪಳ.**